ಸದರೀ ದರಖಾಸ್ತುದಾರನಾದ ಕೆಂಚನ ಅರ್ಜಿಯನ್ನು 1889ನೇ ಇಸವಿ ನವಂಬರು ತಿಂಗಳು ತಾರೀಖು 21ರಲ್ಲು ಕೇಳಿ ಸರಟಿಫಿಕೇಟಿ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದಾಸಂಣನ ಆಸ್ತಿಗೆ ಹಕ್ಕುದಾರರಾದ ವಿಸಿ ಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಅರ್ಜೀ ನಂಬರ್ 74.

ಮೃತಪಟ್ಟ ಹನುಮಕ್ಕನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ ರಂಗಮ್ಮನು, ಮೃತಪಟ್ಟ ಸದರೀ ಹನುಮಕ್ಕನಿಗೆ ಮಗಳು ಆಗಬೇಕೆಂಬ ಹಕ್ಕುದಾರಿ ಮೇಲೆ ತರೀಕೆರೇ ಸ್ಥಳದ ರಂ ಗಮ್ಮನು ತರೀಕೆರೆ ವಾಸಸ್ಥಳಾಗಿ ಮೃತಪಟ್ಟ ಹನುಮಕ್ಕನ ಜಿಂದಗಿ ಬಿಗ್ಯಾಗಿ ಬರತಕ್ಕ 100 ರೂಪಾಯಿ ಸಾಲಗಳನ್ನು ವಸೂಲ್ ಮಾ ಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಿಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರಿ ದರಖಾಸ್ತುದಾರಳಾದ ರಂಗಮ್ಮನ ಅರ್ಜಿಯನ್ನು 1889ನೇ ಇಸವಿ ನವಂಬರು ತಿಂಗಳು ತಾರೀಖು 21ರಲ್ಲು ಕೇಳಿ ಸರಟಿ ಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹನುಮಕ್ಕನ ಆಸ್ತಿಗೆ ಹಕ್ಕುದಾ ರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಅರ್ಜೀ ನಂಬರ್ 77.

ಮೃತಪಟ್ಟ ವಿ. ಸುಬ್ಬಾಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ರಾಮನಾಥಯ್ಯನು, ಮೃತಪಟ್ಟ ಸದರೀ ಸುಬ್ಬಾಯನಿಗೆ ಅವಿಭಕ್ತ ಸಹೋದರನು ಆಗಬೇಕೆಂಬ ಹಕ್ಕುದಾರಿ ಮೇಲೆ ನಗರ ಆಸಬಾ ಸ್ಥಳದ ರಾಮನಾಥಯ್ಯನು ನಗರ ವಾಸಸ್ಥನಾಗಿ ಮೃತಪಟ್ಟ ಸುಬ್ಬಾಯನ ಜಿಂದಗಿ ಬಿಗ್ಯಾಗಿ ಬರತಕ್ಕ 300 ರೂಪಾಯಿ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಿಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ರಾಮನಾಥಯ್ಯನ ಅರ್ಜಿಯನ್ನು 1889ನೇ ಇಸವಿ ನವಂಬರು ತಿಂಗಳು ತಾರೀಖು 21ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬಾಯನ ಆಸ್ತಿಗೆ ಹ ಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಸೆಪ್ಟಂಬರ್ ತಿಂಗಳು 23ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನನ್ನ ಸಹಿ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ನರಹರರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಫಾರೆಸ್ಟ್ ಇಲಾಖಾ.

ತಾರೀಖು 13ನೇ ಸೆಪ್ಟಂಬರ್ 1889.

ಇದರಿಂದ ಸಕಲ ಜನರಿಗೂ ತಿಳಿಯಪಡಿಸುವದೇನಂದರೆ, ರೇಲ್ವೆ ಕಂಟ್ರಾಕ್ಟುದಾರ ಕೈಕೋಬಾದ್ ಸಾಹೆಬರ ಕಡೆ ಉಮ್ಮಣ್ಣನೆಂಬುವನು ಜನ್ನಗಿರೀ ಡಿಪೋದಲ್ಲಿ 1 ಸಾಗವಾನೀ ಬೆಲಗನ್ನು ಕೊಂಡು ಕೊಂಡು 1 ವರುಷವೂ 9 ತಿಂಗಳಾದಾಗ್ಯೂ ರಫ್ತು ಮಾಡದೇ ಇರುವದ್ದರಿಂದ ಸದರೀ ಉಮ್ಮಣ್ಣನೆಂಬುವನೇ ಆಗಲಿ ಅವನ ಕಡೇಯವರೇ ಆಗಲಿ ತಮ್ಮ ಪಕ್ಕನ್ನು ಸ್ಥಿರಪಡಿಸಿ ಸರಕಾರಕ್ಕೆ ಸಲ್ಲತಕ್ಕ ಬಾಡಿಗೆ ಪಾವತಿ ಯಿಂದ ಸದರೀ ಬೆಲಗನ್ನು ಈ ತಾರೀಖು ಲಾಗಾಯತು ಒಂದು ತಿಂಗಳವಳಗಾಗಿ ರಫ್ತು ಮಾಡಿಕೊಳ್ಳಬೇಕು, ಇದಕ್ಕೆ ತಪ್ಪಿದರೆ ಸದರೀ ಬೆಲಗು ಹರಾಜು ಮಾಡಲ್ಪಡುತ್ತದೆ.

ಇ. ಪಿ. ಲೌರಿ,
ಅಸಿಸ್ಟೆಂಟ್ ಕಲೆಕ್ಟರ್.

ಚಿತ್ರದುರ್ಗ ಡಿವಿಜ್ಞ.

ಪ್ರಕಟನೆ.

ತಾರೀಖು 15ನೇ ಸೆಪ್ಟಂಬರ್ 1889.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಹಿರಿಯೂರು ತಾ॥ ವೊಡುವಳ್ಳಿ, ಬಳ್ಳಿ, ಮಾದಿರಹಳ್ಳಕ್ಕೆ ಅಡ್ಡವಾಗಿ ಬಂದು ಹೊಸ ಕೆರೆ ಕಟ್ಟಿಸತಕ್ಕ ಬಗ್ಯೆ ಸ್ 1889ನೇ ಇಸವಿ ಅಕ್ಟೋಬರ್ ಮಾಹೆ 15ನೇ ತಾರೀಖು ವರೆಗೆ ಚಿತ್ರದುರ್ಗ ಡಿವಿಜ್ಞ ಯ ನ್ಯಿಕ್ಯೂಟಿವ್ ಇಂಜನಿಯರವರ ಆಫಿಸಿನಲ್ಲಿ ಮೊಹರಾದ ಟೆಂಡರುಗಳು ತೆಗದು ಕೊಳ್ಳಲ್ಪಡುತ್ತೆ. ಅಂದಾಜಾದಲ್ಲಿ ಕಂಡ ಬಾಬುವಾ

ರು ಪೊತ್ತಗಳನ್ನ ತದರಡಿ ನಮೂದಿಸಿಧೆ ಆದರೆ ಈ ಪೊತ್ತವು ಗೊತ್ತಾದ್ದಲ್ಲವು. 1891ನೇ ಮಾರ್ಚಿ ಮಾಹೆ 31ನೇ ತಾರೀಖು ವ ಳಗಾಗಿ ಕೆಲಸ ಪೂರೈಸಬೇಕು. ಇಪ್ಪರಲ್ಲೀ ಅಂದಾಜು ಮಂಜೂರಾಗಿ ಬಂದೀತು.

2. ದಿವಿ 11 ಘೆಂಟೀ ಲಾಗಾಯತು 5 ಘೆಂಟೀ ವರಿವಿಗೂ ಚಿತ್ರದುರ್ಗ ಡಿವಿಜ್ಞ ಯಗ್ಜಿಕ್ಯೂಟಿವ್ ಇಂಜನಿಯರವರ ಆಫಿಸಿನಲ್ಲಿ ಇರುವ ನಖಾಸೆಗಳೂ ಮತ್ತು ತಪಶೀಲ್‌ವಾರ್ ಅಂದಾಜು ಷರತ್ತುಗಳನ್ನೂ ನೋಡಬಹುದು.

3. ಇದಕ್ಕಾಗಿ ಛಾಪಿಸಿರುವ ಫಾರಂಗಳಲ್ಲಿ ಟೆಂಡರುಗಳನ್ನ ಬರೆದು ಕಳುಹಿಸಬೇಕು, ಅಂಥಾ ಫಾರಂಗಳು ಯಗ್ಜಿಕ್ಯೂಟಿವ್ ಇಂಜನಿಯರವರ ಆಫಿಸಿನಲ್ಲಿ ದೊರೆಯುತ್ತವೆ. ಇದರಡಿ ನಮೂದಿಸಿರುವಂತೆ ದಂದು ತಪ್ಪೆ ತಯಾರ್ಮಾಡಿ ಆಯಾ ಬಾಬಿಗೆ ಯಾವ ದ ರದಂತೆ ಕೆಲಸ ನಡಿಸಲು ಇಷ್ಟವಿಧೆಯೋ ಆದನ್ನ ನಮೂದಿಸಿ ಟೆಂಡರ್‌ವಡನೇ ರವಾನಿಸತಕ್ಕದ್ದು.

ಕೆಲಸಗಳ ವಿವರ.		ಪೊತ್ತ.	ದರ.
ನೀರಿಗೆ			
ಮಟ್ಟೀಕಾಮಗಾರಿ	ಸಲಗಜ	92102	
ಹಳ್ಳಕ್ಕೆ ಭರ್ತಿ .. .	..	23478	
ಹೊಸಕಲ್ಲುಕೆಲಸ	..	5002	
ಹೂಳುತೆಗೆಯುವದು ನೀರು ಹೊಡೆಯುವದು ವಗೈರೆ ..	..	ಮೊತ್ತ	
ಗ್ರೇಡಕಲ್ಲುಗಳು	ವಂದಕ್ಕೆ	22	
ಲೆಟ್‌ವಾರ್ಕ್ ಕಲ್ಲುಗಳು	..	2	
ತಲಾವುಕಲ್ಲು	..	1	
ನೀರು ಮಟ್ಟ ತೋರಿಸುವ ಕಲ್ಲು ತೂಬು	..	1	
ಸುರತೆ ಗಚ್ಚಿ	ಸಲಅಡಿ	4762	
ಕಲ್ಲುಸುಣ್ಣ	..	592	
ಚಪ್ಪಡೀಕಲ್ಲು	ಚದರಡಿ	1093	
ಗಚ್ಚೀಕರ್ಮಾಕೆಲಸ	ಸಲಅಡಿ	236	
ಗಿಲಾವಿ	ಚದರ	1430	
ಕೊಂತ್ತ ಸರಪಣಿ ಸಮೇತ	ವಂದಕ್ಕೆ	4	
ಬಿಡಗಂಡಿಹಲಿಗೆ	..	2	
ತೂಬಿನ ಅಡ್ಡಕಲ್ಲುಗಳಲ್ಲಿ ಸಂಗಕ್ಯಾಷ್ ವಗೈರೆ ..	..	8	
ದಾಮಿಗೆ ಕಬ್ಬಿಣದ ಹಲಿಗೆಗಳು	..	ಮೊತ್ತ	
ಕೋರೆಡಿ	..	ಮೊತ್ತ	
ನೀರಾವರೀ ಕಾಲ್ವೆತೆಗೆಯುವದು	..	ಮೊತ್ತ	

4. ಪ್ರತಿ ಟೆಂಡರೂ ವಡನೆ 500 ರೂಪಾಯಿಗಳು ನಗದಾಗಿ ಆಗಲಿವ ಗವರ್ಮೆಂಟ್ ಪ್ರೋ ನೋಟ್ಸ್ ಮೂಲಕವಾಗಿ ಆಗಲಿ ಸರ್ಕಾರದಲ್ಲಿ ಠೇವಣೀ ಯಿಡುವದಕ್ಕಾಗಿ ಹಾಜರ್ಮಾಡತಕ್ಕದ್ದು, ಮತ್ತು ವೈಜುವಳಿ ಬಳಿ ಹೊಸಕೆರೆ ಕಟ್ಟುವೆದಕ್ಕೆ ಟೆಂಡರು ಎಂದು ಮೇಲ್ ವಿಳಾಸವಿರದು ಕಳುಹಿಸಬೇಕು. ಇದಕ್ಕೆ ತಪ್ಪಿದರೆ ಟೆಂಡರ್ ತಿರಸ್ಕರಿಸಲ್ಪಡುತ್ತೆ.

5. ಟೆಂಡರ್‌ಯಾನೆ ದರಖಾಸ್ತು ಆಖೈರ್ ಮಂಜೂರಾತಿಯು ಚೀಫ್ ಇಂಜನಿಯರ್ ಸಾಹೆಬರವರಿಗೆ ಕೀರಿದ್ದಾಗಿಯಿಧೆ ದರಖಾಸ್ತು ಅಂಗೀಕರಿಸಿದ್ದಕ್ಕೆ ಆಗಲಿ ಅಥವಾ ತಿರಸ್ಕರಿಸಿದ್ದಕ್ಕೆ ಆಗಲಿ ಕಾರಣ ಕೊಡಲು ಬದ್ಧರಾಗಿರುವದಿಲ್ಲ.

6. ದರಖಾಸ್ತು ಮಂಜೂರಾದ 8 ದಿವಸಗಳ ವಳಗಾಗಿ ಚಡ ದರಖಾಸ್ತುದಾರನು ಕಂಟ್ರಾಕ್ಟು ಬಾಂಡು ಬರಮು ಕೊಡಬೇಕು. ಆದಕ್ಕೆ ತಪ್ಪಿದರೆ ಕಂಟ್ರಾಕ್ಟು ವಜಾ ಮಾಡಿ ಅಡ್ವಾನ್ಸ್ ತರೀಕ್ ಕೊಟ್ಟಿದ್ದ ವೊಬಲಗನ್ನ ಸರ್ಕಾರಕ್ಕೆ ಕೀರಿಸಲ್ಪಡುತ್ತೆ.

7. ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೆಬರವರ ಆಫಿಸ್ ನೋಟಿಸ್ ಬೋರ್ಡಿನಮೇಲೆ ಸಾರಾಯಾದ ಕಾಲಬಲ್ಲೆ ಅಂಗೀಕರಿಸಿದ ಚಡ ದರಖಾಸ್ತುದಾರನ ಹೆಸರು ಪ್ರಕಟಿಸಲ್ಪಡುತ್ತೆ.

8. ಆಖೈರ ವಳಗಾಗಿ ದರಖಾಸ್ತು ಅಂಗೀಕರಿಸಿದ ವಿಷಯಕ್ಕೆ ಆಗಲಿ ಅಥವಾ ತಿರಸ್ಕರಿಸಿದ ವಿಷಯವೇ ಆಗಲಿ ತಿಳಿಯಲು ಬರ ದುಕೊಂಡರೆ ಜವಾಬ್ ದೊರಿಯಲಾರದು

9. ಯಾವದಾವದೂ ಬಂದು ದರಖಾಸ್ತು ಅಂಗೀಕರಿಸಿದ ತರುವಾಯ ತಿರಸ್ಕರಿಸಿದ ದರಖಾಸ್ತು ಸಂಗಡ ಕಳುಹಿಸಿದ ಡಿಪಾಜಿಟ್ ವೊಬಲಗನ್ನ ವಾಪಸ್ ಮಾಡಲ್ಪಡುತ್ತೆ.

ಡಿ. ರಂಗರಾವ್,
ಎಗ್ಜಿಕ್ಯೂಟಿವ್ ಇಂಜನಿಯರ್.